For More Job News Visit : www.kscvaani.com



ವೃತ್ತ ಕಛೇರಿ: ಬೆಂಗಳೂರು ಪಶ್ಚಿಮ,
ನಂ. 100, ಮಸೀದಿ ರಸ್ತೆ, ಫ್ರೇಜರ್ ಟೌನ್,
ಬೆಂಗಳೂರು–560005. ಫೋನ್: 080–25808901–16

CIRCLE OFFICE- BANGALORE WEST,
No.100, Mosque Road, Frazer Town,
Bangalore- 560005. Phone 080–2580 8901-16

E-mail: cobangwesthrd@pnb.co.in, cobangwestgad@pnb.co.in

ಜವಾನ ಹುದ್ದೆಯ ನೇಮಕಾತಿಗೆ ಜಾಹೀರಾತು

ಸಾರ್ವಜನಿಕ ವಲಯದ ಪ್ರಮುಖ ಬ್ಯಾಂಕ್‌ಗಳಲ್ಲಿ ಒಂದಾದ ಪಂಜಾಬ್ ನ್ಯಾಷನಲ್ ಬ್ಯಾಂಕ್, ತನ್ನ ಬೆಂಗಳೂರು ಪಶ್ಚಿಮ ವೃತ್ತದ ಅಧೀನದಲ್ಲಿರುವ ಶಾಖೆಗಳಿಗೆ ಕೆಳದರ್ಜೆ ಕೆಡರ್ ಜವಾನ ಹುದ್ದೆಗಳ ನೇಮಕಾತಿಗೆ ಕರ್ನಾಟಕದಲ್ಲಿರುವ ಅರ್ಹ ಭಾರತೀಯ ಪ್ರಜೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವೇತನ ಶ್ರೇಣಿಯು 11ನೇ ದ್ವಿಪಕ್ಷೀಯ ಒಡಂಬಡಿಕೆ ಮತ್ತು ಕಾಲಕಾಲಕ್ಕೆ ಬ್ಯಾಂಕ್ ಅನುಷ್ಠಾನಗೊಳಿಸುವ ಒಡಂಬಡಿಕೆಗಳಿಂದ ನಿಯಂತ್ರಿಸಲ್ಪಡುತ್ತದೆ.

ಜಿಲ್ಲಾವಾರು ಖಾಲಿ ಹುದ್ದೆಗಳ ವಿವರಗಳು ಈ ರೀತಿ ಇದೆ: (1) ಬೆಂಗಳೂರು ನಗರ: 09, (2) ಬೆಂಗಳೂರು ಗ್ರಾಮೀಣ: 03, (3) ಮಂಗಳೂರು: 04, (4) ಮೈಸೂರು: 02, (5) ತುಮಕೂರು: 01, (6) ಉಡುಪಿ: 01,

ನೇಮಕಾತಿ ಪ್ರಕ್ರಿಯೆಗಾಗಿ ವರ್ಗವಾರು ಖಾಲಿ ಹುದ್ದೆಗಳು ಕೆಳಗಿನಂತಿವೆ:

ರಾಜ್ಯ:	ಎಸ್.ಸಿ	ಎಸ್.ಟಿ	ಓ.ಬಿ.ಸಿ	ಇ.ಡಬ್ಲ್ಯೂ.ಎಸ್	ಸಾಮಾನ್ಯ/ಯು.ಆರ್	ಒಟ್ಟು :	ಹೆಚ್‌ಐ*	ಇಎಕ್ಸ್‌ಎಸ್*
ಕರ್ನಾಟಕ	3	1	6	2	8	20	1	4

* ಸಮಮಟ್ಟದ ಮೀಸಲಾತಿ

1) ವಿದ್ಯಾರ್ಹತೆ ಮತ್ತು ವಯೋಮಿತಿ 01.01.2022 ರಂತೆ.

ಹುದ್ದೆ	ವಯೋಮಿತಿ 01.01.2022 ರಂತೆ :	ವಿದ್ಯಾರ್ಹತೆ:
ಜವಾನ	ಕನಿಷ್ಠ 18 ವರ್ಷ, ಗರಿಷ್ಠ 24 ವರ್ಷ ಜೊತೆಗೆ ವಯೋಮಿತಿಯಲ್ಲಿ ಅನ್ವಯಿಸುವ ಸಡಿಲಿಕೆ ಇದೆ.	ಕನಿಷ್ಠ ಮತ್ತು ಗರಿಷ್ಠ 12ನೇ ತರಗತಿ ಅಥವಾ ತತ್ಸಮಾನ ದಲ್ಲಿ ತೇರ್ಗಡೆ ಹೊಂದಿರಬೇಕು. ಕನ್ನಡ ಮತ್ತು ಇಂಗ್ಲಿಷ್ ನಲ್ಲಿ ಓದುವ/ಮಾತನಾಡುವ ಮೂಲ ಜ್ಞಾನ ಇರಬೇಕು (ಅಭ್ಯರ್ಥಿಗಳು ಹೆಚ್ಚಿನ ವಿದ್ಯಾರ್ಹತೆ, ಅಂದರೆ ಪದವಿ ಅಥವಾ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದರೆ ಅರ್ಜಿ ಸಲ್ಲಿಸಲು ಅರ್ಹರಲ್ಲ).

2) ಗರಿಷ್ಠ ವಯೋಮಿತಿ ಸಡಿಲಿಕೆ: ಎಸ್ ಸಿ/ಎಸ್ ಟಿ ಅಭ್ಯರ್ಥಿಗಳಿಗೆ 5 ವರ್ಷ ವಯೋಮಿತಿ ಸಡಿಲಿಕೆ ಇದೆ. ಎಸ್ ಸಿ/ಎಸ್ ಟಿ, ದೈಹಿಕ/ಆರ್ಥೋಪೆಡಿಕಲ್ ಅಂಗವಿಕಲ ಅಭ್ಯರ್ಥಿಗಳಿಗೆ 15 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 03 ವರ್ಷ, ಒಬಿಸಿ ದೈಹಿಕ/ಆರ್ಥೋಪೆಡಿಕಲ್ ಅಂಗವಿಕಲ ಅಭ್ಯರ್ಥಿಗಳಿಗೆ 13 ವರ್ಷ. ದೈಹಿಕ/ಆರ್ಥೋಪೆಡಿಕಲ್ ಅಂಗವಿಕಲ ಅಭ್ಯರ್ಥಿಗಳು 10 ವರ್ಷ, ಮಾಜಿ ಸೈನಿಕ ಅಭ್ಯರ್ಥಿಗಳಿಗೆ 3 ವರ್ಷ ಮತ್ತು ಹೆಚ್ಚುವರಿಯಾಗಿ ಸೇನಾ ಸೇವೆ ಹಾಗೂ 1984ರ ಗಲಭೆಯಲ್ಲಿ ಮೃತಪಟ್ಟ ಮಕ್ಕಳ/ ಕುಟುಂಬದ ಸದಸ್ಯರಿಗೆ 03 ವರ್ಷ. ಎಲ್ಲಾ ಸಡಿಲಿಕೆಗಳ ಒಟ್ಟು ಗರಿಷ್ಠ ವಯೋಮಿತಿಯು 45 ವರ್ಷ ಮೀರಿರಬಾರದು, ಅದು ಸರ್ಕಾರದ ಆದೇಶಗಳಲ್ಲಿ ಒದಗಿಸಲಾಗದ ಹೊರತು.

3) ವೇತನ ಶ್ರೇಣಿ : 14,500 – 28145 ಜೊತೆಗೆ ಬ್ಯಾಂಕ್ ನೀತಿಯ ಪ್ರಕಾರ ಭತ್ಯೆಗಳು.

4) ಬಿಲ್ಲೆಗಳ ವಾಸಸ್ಥಳ : ಅರ್ಹ ಅಭ್ಯರ್ಥಿಗಳು ಹುದ್ದೆಗಳಿಗೆ ಪ್ರಕಟಿಸಿದ ಆಯಾ ಬಿಲ್ಲೆಗಳ ನಿವಾಸಿಯಾಗಿರಬೇಕು.

5) ಅಗತ್ಯ ದಾಖಲೆಗಳು: ಈ ಕೆಳಗಿನ ದಾಖಲೆಗಳ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಅರ್ಜಿ ಸಮೂನೆಯೊಂದಿಗೆ ಲಗತ್ತಿಸಬೇಕು. (i) ಸಂಪೂರ್ಣ ಅಂಕಪಟ್ಟಿಗಳ ನಕಲು (10 ಮತ್ತು 12ನೇ ತರಗತಿ). (ii) ಶಾಶ್ವತ ವಾಸಸ್ಥಳ ವೆಂದು ನೋಂದಣಿ ಮಾಡಿರುವ ಪುರಾವೆ. (iii) ವಿಳಾಸದ ಪುರಾವೆ ಮತ್ತು ಐಡಿ ಪ್ರೂಫ್ ನ ಪ್ರತಿ. (v) ಅಗತ್ಯವಿದ್ದರೆ ಜಾತಿ ಪ್ರಮಾಣಪತ್ರದ ನಕಲು. (vi) ನೋಂದಣಿ ಯಾಗಿದ್ದರೆ ಉದ್ಯೋಗ ವಿನಿಮಯ ನೋಂದಣಿ ಕಾರ್ಡ್. (vii) ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಇಡಬ್ಲ್ಯೂಎಸ್ (ಆರ್ಥಿಕವಾಗಿ ದುರ್ಬಲ ವಿಭಾಗ).

6) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : ಅರ್ಜಿಗಳನ್ನು ಕೆಳಕಂಡ ವಿಳಾಸಕ್ಕೆ "ಕೆಳದರ್ಜೆ ಕೆಡರ್–2022–23 ರಲ್ಲಿ ಜವಾನ ಹುದ್ದೆಯ ನೇಮಕಾತಿಗಾಗಿ" ಎಂದು ನಮೂದಿಸಿ ಸ್ಪೀಡ್ ಪೋಸ್ಟ್/ ರಿಜಿಸ್ಟರ್ಡ್ ಪೋಸ್ಟ್ ಮೂಲಕವೇ ಕಳುಹಿಸತಕ್ಕದ್ದು. ಮುಖ್ಯ ವ್ಯವಸ್ಥಾಪಕರು (ಹೆಚ್‌ಆರ್‌ಡಿ), ಪಂಜಾಬ್ ನ್ಯಾಷನಲ್ ಬ್ಯಾಂಕ್, ವೃತ್ತ ಕಛೇರಿ, ಬೆಂಗಳೂರು ಪಶ್ಚಿಮ, ನಂ. 100, ಮಸೀದಿ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005. ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ 03.03.2022. ಅರ್ಜಿ ಸಮೂನೆಯನ್ನು ಹತ್ತಿರದ ಶಾಖೆ/ವೃತ್ತ ಕಛೇರಿಯಿಂದ ಪಡೆಯಬಹುದು.

7) 03.03.2022 ರ ನಂತರ ಸ್ವೀಕರಿಸಿದ ಅರ್ಜಿಗಳು/ ಅಪೂರ್ಣ ಅರ್ಜಿಗಳು/ಎಲ್ಲಾ ವಿಷಯಗಳಲ್ಲಿ ಪಡೆದ ಅಂಕಗಳನ್ನು ಸೂಚಿಸುವ 10ನೇ ಮತ್ತು 12ನೇ ಅಂಕಪಟ್ಟಿಗಳಿಲ್ಲದ ಅರ್ಜಿಗಳು/ಅಗತ್ಯ ದಾಖಲೆಗಳನ್ನು ಸಲ್ಲಿಸದಿರುವುದು/ ಸ್ವಯಂ ದೃಢೀಕರಿಸದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. 10 (ವೈಟೇಜ್ 40%) ಮತ್ತು 12ನೇ (ವೈಟೇಜ್ 60%) ತರಗತಿಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಶೇಕಡಾವಾರು ಆಧಾರದ ಮೇಲೆ ಜವಾನರ ಆಯ್ಕೆ ಮಾಡಲಾಗುತ್ತದೆ. ಅರ್ಜಿಗಳನ್ನು ಪರಿಗಣಿಸದ ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿಯನ್ನು ಕಳುಹಿಸಲಾಗುವುದಿಲ್ಲ. ಆಯ್ಕೆಗೆ ಸಂಬಂಧಿಸಿದಂತೆ ಬ್ಯಾಂಕ್ ನ ನಿರ್ಧಾರವೇ ಅಂತಿಮವಾಗಿರುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ: 15.02.2022

ಸಹಿ/– ಮುಖ್ಯ ವ್ಯವಸ್ಥಾಪಕರು (ಹೆಚ್‌ಆರ್‌ಡಿ),
ಪಂಜಾಬ್ ನ್ಯಾಷನಲ್ ಬ್ಯಾಂಕ್